

# ಝುಮ್ ಝುಮ್ ಗುಂಜನ್!

ತೆಲುಗಿನ 'ವೈಫ್ ಐ' ಸಿನಿಮಾ ಮೂಲಕ ಹದಿವಯದವರ ಏಕಾಂತಕ್ಕೆ ಸಾಕಷ್ಟು ಸರಕು ಒದಗಿಸಿದ್ದ ಬಿಚ್ಚಮ್ಮ ಗುಂಜನ್ ಅರಸ್ ಕನ್ನಡಕ್ಕೂ ಬಂದಿದ್ದಾರೆ. ಗುಂಜನ್ ಅವರದ್ದು ಒಂದು ಯೂ ಟ್ಯೂಬ್ ಚಾನೆಲ್ ಇದೆ. ಅದರಲ್ಲಿ ತಮ್ಮ ಒಂದು ಸಾಲಿನ ಪರಿಚಯವನ್ನು ಅವರು, 'ರೂಪದರ್ಶಿ, ನಟಿ, ನೃತ್ಯಗಾರ್ತಿ, ಹಾಡುಗಾರ್ತಿ' ಎಂದು ಬರೆದುಕೊಂಡಿದ್ದಾರೆ. ಆದರೆ ಆ ಚಾನೆಲ್‌ನಲ್ಲಿ ಒಮ್ಮೆ ಕಣ್ಣಾಡಿಸಿದರೆ ಹಾಡು, ಸಂಭಾಷಣೆಗಳನ್ನು ಕೇಳುವ ವಿಡಿಯೊಗಳಿಗಿಂತ ಗಪ್‌ಶುಪ್‌ಆಗಿ ಮ್ಯೂಟ್ ಮಾಡಿ ನೋಡುವಂಥ ಮೈಸಿರಿ ದರ್ಶನದ ವಿಡಿಯೊಗಳೇ ಹೆಚ್ಚಾಗಿ ಕಾಣಸಿಗುತ್ತವೆ. 'ಗಂದಿ ಬಾತ್' ಎಂಬ, ಹೆಸರಿಗೆ ತಕ್ಕ ವೆಬ್‌ಸೀರಿಸ್‌ನಲ್ಲಿಯೂ ನಟಿಸಿರುವ ಗುಂಜನ್‌ಗೆ ಸೋಷಿಯಲ್ ಮೀಡಿಯಾಗಳಲ್ಲಿ ಅಸಂಖ್ಯಾತ ಹಿಂಬಾಲಕರಿದ್ದಾರೆ. ಯಾಕೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೆ?

ಇಂಥ ಉಜ್ವಲ ಹಿನ್ನೆಲೆಯುಳ್ಳ ಗುಂಜನ್ ಕನ್ನಡಕ್ಕೆ ಬರುತ್ತಿದ್ದಾರೆಂಬ ಸುದ್ದಿ ಕೇಳಿಯೇ ಪಡ್ಡೆಗಳು ಸಾಮು ಮಾಡಲು ಆರಂಭಿಸಿದ್ದಾರಂತೆ. ಅಂದಹಾಗೆ ಅವರನ್ನು ಪಲ್ಲಕ್ಕಿಯ ಮೇಲಿಟ್ಟು ಚಂದನವನದ ಗಲ್ಲಿಗೆ ಕರೆತರುತ್ತಿರುವ ಸಿನಿಮಾ ಹೆಸರು 'ಡೆಡ್ಲಿ ಅಫೇರ್'. ಈ ಚಿತ್ರವನ್ನು ನಿರ್ಮಾಣ ಮಾಡಿ ನಿರ್ದೇಶಿಸುತ್ತಿರುವುದು ರಾಜೇಶ್ ಮೂರ್ತಿ. ಹಣ ಹೂಡಿ ಆ್ಯಕ್ಷನ್ ಕಟ್ ಹೇಳಿದ ಮೇಲೆ ತೆರೆಯ ಮೇಲೆ ನಾಯಕಿಯರ ನಡು ಬಳಸಲು ಅನ್ಯರಿಗೆ ಅವಕಾಶ ಕೊಡುವುದುಂಟೇ? ರಾಜೇಶ್ ಈ ಚಿತ್ರದಲ್ಲಿ ತಾವೇ ನಾಯಕನಾಗಿ ನಟಿಸುತ್ತಿದ್ದಾರೆ. ಈ ಹಿಂದೆ 'ಷಡ್ಯಂತ್ರ', 'ರೆಡ್', 'ಬ್ಲ್ಯೂ ಐಸ್' ಎಂಬ ಮನೆಮಂದಿಯೆಲ್ಲ ಪ್ರತ್ಯೇಕವಾಗಿ ಕೂತು ನೋಡಬೇಕಾದ ಸಿನಿಮಾಗಳನ್ನು ನಿರ್ಮಿಸಿದ ಅಗ್ಗಳಿಕೆ ಇವರಿಗಿದೆ. ವಿವಾಹೇತರ ಸಂಬಂಧದ ಕುರಿತಾದ ಕಥೆ ಇರುವ ಈ ಚಿತ್ರದಲ್ಲಿ ಗುಂಜನ್, ಸೈಕೊ ಮಹಿಳೆಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ. ಚಿತ್ರಕ್ಕೆ ನಿತಿನ್ ಕುಮಾರ್ ಸಂಗೀತ ನೀಡಿದ್ದಾರೆ. ವಿನೋದ್ ಆರ್. ಛಾಯಾಗ್ರಹಣವಿದೆ. ಸ್ವಪನ್ ಕೃಷ್ಣ, ಗುಂಜನ್ ಅರಸ್, ರಾಹುಲ್ ಸೋಮಣ್ಣ, ರಾಜೇಶ್ ಮಿಶ್ರ ಹಾಗೂ ಮಾಸ್ಟರ್ ವಿಶ್ರುತ್ ತಾರಾಬಳಗದಲ್ಲಿದ್ದಾರೆ. ■

# ರೆಮೊ ಲವ್ ಸ್ಟೋರಿ

ಪವನ್ ಒಡೆಯರ್ ಪ್ರೇಮದ ಗುಂಗಿನಲ್ಲಿದ್ದಾರೆ. ಮದುವೆಯಾಗಿ ವರ್ಷಗಳ ಮೇಲೆ ಎಂಥದಿದು ಲವ್ ಗುಂಗು ಎಂಬ ಹುಬ್ಬೇರಿಸಬೇಡಿ. ಅದು ಅವರ ಬದುಕಿನಲ್ಲಿ ಘಟಿಸಿದ ಪ್ರೇಮದ ಗುಂಗಲ್ಲ, ಅವರು ಆ್ಯಕ್ಷನ್ ಕಟ್ ಹೇಳುತ್ತಿರುವ 'ರೆಮೊ' ಸಿನಿಮಾದ ಪ್ರೇಮಕಥೆಯ ಗುಂಗು.

ಇತ್ತೀಚೆಗೆ ಚಿತ್ರತಂಡ ಫಸ್ಟ್ ಲುಕ್ ಟೀಸರ್ ಅನ್ನು ಬಿಡುಗಡೆ ಮಾಡಿತ್ತು. ಆ ಲುಕ್‌ಗೆ ಸಾಕಷ್ಟು ಜನರು ಫಿದಾ ಆಗಿದ್ದಾರಂತೆ. 'ಎಲ್ಲ ಕಡೆಯಿಂದ ಸಖತ್ ಒಳ್ಳೆ ರೆಸ್ಪಾನ್ಸ್ ಬರುತ್ತಿದೆ. ಐಎಂಡಿ ಮತ್ತು ಟ್ವಿಟರ್‌ನಲ್ಲೆಲ್ಲ ಟ್ರೆಂಡಿಂಗ್‌ನಲ್ಲಿದೆ' ಎಂದು ಪವನ್ ಖುಷಿಯಿಂದ ಹೇಳಿಕೊಳ್ಳುತ್ತಾರೆ. ಗಿಟಾರ್ ಹಿಡಿದು ತನ್ಮಯನಾಗಿ ಹಾಡುತ್ತ ನಿಂತಿರುವ ಇಶಾನ್ ಫಸ್ಟ್ ಲುಕ್‌ನಲ್ಲಿಯೇ ಇದೊಂದು ಮ್ಯೂಸಿಕಲ್ ಲವ್ ಸ್ಟೋರಿ ಎಂಬುದರ ಸುಳಿವೂ ಸಿಗುತ್ತದೆ. 'ಇದೊಂದು ಮ್ಯಾಜಿಕಲ್ ಲವ್ ಸ್ಟೋರಿನೂ ಹೌದು' ಎಂದು ಪ್ರತಿಪಾದಿಸುತ್ತಾರೆ ಪವನ್. 'ಗೂಗ್ಲಿ' ನಂತರ ಮತ್ತೆ ಪೂರ್ಣ ಪ್ರಮಾಣದ ಪ್ರೇಮಕಥೆ ನಿರ್ದೇಶಿಸುತ್ತಿದ್ದೇನೆ. ಶೇ. 80ರಷ್ಟು ಚಿತ್ರೀಕರಣ ಮುಗಿದಿದೆ. ನಾಯಕನ ಇಂಟ್ರಡಕ್ಷನ್ ಹಾಡು ಮತ್ತು ಕೆಲವು ದೃಶ್ಯಗಳ ಚಿತ್ರೀಕರಣ ಅಷ್ಟೇ ಬಾಕಿ ಇದೆ. ಜನವರಿಯಲ್ಲಿಯೇ ಚಿತ್ರೀಕರಣ ಮುಗಿಸಿ, ಸಾಧ್ಯವಾದಷ್ಟೂ ಮಾರ್ಚ್ ಹೊತ್ತಿಗೆ ಸಿನಿಮಾ ತೆರೆಗೆ ತರಬೇಕು ಎಂಬ ಯೋಚನೆ ಇದೆ' ಎಂದು ಅವರು ವಿವರಣೆ ನೀಡುತ್ತಾರೆ.

ಇಶಾನ್ ಮತ್ತು ಆಶಿಕಾ ರಂಗನಾಥ್ ತೆರೆಯನ್ನು ಹಂಚಿಕೊಂಡಿರುವ ಈ ಸಿನಿಮಾದಲ್ಲಿ ತಮಿಳಿನ ಶರತ್‌ಕುಮಾರ್ ಮತ್ತು 'ರೋಜಾ' ಖ್ಯಾತಿಯ ಮಧುಬಾಲಾ ಕೂಡ ನಟಿಸುತ್ತಿದ್ದಾರೆ. ವೈದಿ ಛಾಯಾಗ್ರಹಣ, ಅರ್ಜುನ್ ಜನ್ಯ ಸಂಗೀತ ಈ ಚಿತ್ರಕ್ಕಿದೆ. ■

